ಇ) ಈ ವಸತಿ ಶಾಲೆಗಳಲ್ಲಿ ಒಟ್ಟು 136 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ

579 (378) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಪರಿಶಿಷ್ಟ ಜಾತಿ/ಪಂಗಡದ ಆಯೋಗದ ಅಧ್ಯಕ್ಷರಾದ ಫಕೀರ್ ಭಾಯಿ ವಗೇಲಾ ಬೆಂಗಳೂರಿಗೆ ಬಂದು ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಿ ಎಂದು ಕೊಟ್ಟ ಸೂಚನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?

ಆ) ಪರಿಗಣಿಸಿದ್ದಲ್ಲಿ ಸೂಚನೆ ಕೊಟ್ಟ ದಿನಾಂಕದ ನಂತರ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು).

ಅ) ಹೌದು

ಆ) ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷರು ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರ ಭರ್ತಿಗೆ ಸೂಚನೆ ನೀಡುವ ಮುಂಚೆ ಹಾಗೂ ನಂತರದಲ್ಲಿಯೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಶೀಲಿಸಲು ರಚಿತವಾಗಿರುವ ಸಚಿವ ಸಂಪುಟ ಉಪಸಮಿತಿಯು ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ನೀಡುತ್ತಿದೆ ಅದರಂತೆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕಾರ್ಯವು ನಿರಂತರವಾಗಿ ನಡೆಯುತ್ತಿದೆ

581 (711) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಎಂ ಎಲ್.ಎ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2003–04, 2004–05, 2005–06, ಹಾಗೂ 2006–07 ರಲ್ಲಿ ವರದಿಯಾಗಿರುವ ಏಡ್ಸ್ ಪ್ರಕರಣಗಳೆಷ್ಟು?

ಆ) ಈ ಪ್ರಕರಣಗಳನ್ನು ರಾಷ್ಟ್ರೀಯ ಸರಾಸರಿ ಪ್ರಕರಣಗಳಿಗೆ ಹೋಲಿಸಿದಾಗ ಕಂಡು ಬರುವ ವಿವರಗಳೇನು?

ಇ) ಏಡ್ಸ್ ಕಾಯಿಲೆ ಹರಡದಂತೆ ತಡೆಗಟ್ಟಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಿಯಾತ್ಮಕ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ವರದಿಯಾಗಿರುವ ಏಡ್ಸ್ ಪ್ರಕರಣಗಳು ಈ ರೀತಿ ಇವೆ

ವರ್ಷ	ಪ್ರಕರಣಗಳ ಸಂಖ್ಯೆ
2003–04	1661
2004–05	1771
2005–06	2404
2006–07	1560

(ಏಪ್ರಿಲ್–ಡಿಸೆಂಬರ್ 06 ರವರೆಗೆ)

ಆ) ವರ್ಷಕ್ಕೆ ರಾಷ್ಟ್ರೀಯ ಸರಾಸರಿ ಪ್ರಕರಣಗಳ ಸಂಖ್ಯೆ 6250

ಈ ಸರಾಸರಿಗೆ ಹೋಲಿಸಿದಾಗ ರಾಜ್ಯದ ಶೇಕಡ ಪಾಲು ಈ ಕೆಳಗಿನಂತಿದೆ

ವರ್ಷ	ಶೇಕಡ ಪಾಲು
2003–04	26 6
2004–05	28 4
2005–06	38 5
2006–07	25 0

(ಏಪ್ರಿಲ್–ಡಿಸೆಂಬರ್ 06 ರವರೆಗೆ)

ಇ) ಕೈಗೊಂಡ ಕ್ರಮಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ

ಏಡ್ಸ್ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

- ರಾಜ್ಯದಲ್ಲಿ HIV/AIDS ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮೊದಲಿನಿಂದ ಹಮ್ಮಿಕೊಂಡಿದೆ KSAPS ಜೊತೆಗೆ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ಒಗ್ಗೂಡಿ HIV/AIDS ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ

- ಸುಮಾರು 95 ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳು ಪಿಪಿಟಿಸಿಟಿ, ಉದ್ದೇಶಿತ ಕಾರ್ಯಕ್ರಮ (Targeted intervenions) ಹಾಗೂ ದೂರವಾಣಿ ಸಮಾಲೋಚನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಭಾಗಿಗಳಾಗಿದ್ದಾರೆ ಇವರು ಸೇವೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಇವರ ಸೇವೆಗಳನ್ನು ಬಳಸಿಕೊಳ್ಳಲಾಗುವುದು
- ಹೆಚ್‌ಐವಿ ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್, UNAIDS, USAID, ಬಿಲ್‌ಗೇಟ್, ಕ್ಲಿಂಟನ್ ಫೌಂಡೇಷನ್ ಹಾಗೂ ಇತರೆ ಸಂಸ್ಥೆಗಳೂ ಸಹ ಸಹಕಾರ ನೀಡುತ್ತಿದ್ದಾರೆ
- ಈ ಕಾರ್ಯಕ್ರಮ ಯಶಸ್ಸು ಕಾಣಲು ಸೇವಾ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ ಈ ನಿಟ್ಟಿನಲ್ಲಿ ನಿಯಂತ್ರಣ ಕ್ರಮಗಳಾಗಿ ಈಗಾಗಲೇ ವಿಸಿಟಿಸಿ 61 ಕೇಂದ್ರಗಳು, ಸೋಂಕಿತ ತಾಯಿಯಿಂದ ಮಗುವಿಗೆ ಹೆಚ್‌ಐವಿ ಸೋಂಕು ತಡೆಗಟ್ಟಲು ಪಿಪಿಟಿಸಿಟಿ 82 ಕೇಂದ್ರಗಳು, ಸಂಯುಕ್ತ ವಿಸಿಟಿಸಿ/ ಪಿಪಿಟಿಸಿಟಿ 194 ಕೇಂದ್ರಗಳು, ಲೈಂಗಿಕ ಸಂಪರ್ಕ ಸೋಂಕನ್ನು ತಡೆಗಟ್ಟಲು ಎಸ್ ಟಿ ಡಿ 206 ಕ್ಲಿನಿಕ್‌ಗಳು, ಸೋಂಕಿತರ ಬೆಂಬಲ ಹಾಗೂ ಆರೈಕೆ ಮಾಡಲು ಎ ಆರ್ ಟಿ 12 ಕೇಂದ್ರಗಳು ಹಾಗೂ ಹೆಚ್‌ಐವಿ/ಟಿಬಿ 33 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಇವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೇ ಸಿಹೆಚ್‌ಸಿ ಹಾಗೂ ಪಿಹೆಚ್‌ಸಿ ಮಟ್ಟಕ್ಕೂ ವಿಸ್ತರಿಸಲಾಗಿದೆ
- ಹಾಗೆಯೇ ಪೊಲೀಸ್ ಸಿಬ್ಬಂದಿಗೆ, ಅಂಗನವಾಡಿ ಕಾರ್ಯಕರ್ತರಿಗೆ, ವೈದ್ಯರಿಗೆ, ದಾದಿಯರಿಗೆ ವಿವಿಧ ಮಟ್ಟದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ
- HIV/AIDS ಬಾದಿತರ ಆರೈಕೆ, ಜೀವನಮಟ್ಟ ಸುಧಾರಿಸಲು ಹಾಗೂ ಅವರ ಜೀವಿತದ ಅವಧಿ ಹೆಚ್ಚಿಸುವುದಕ್ಕಾಗಿ ಕಳೆದ ಆಗಸ್ಟ್‌ನಲ್ಲಿ 8 ನೂತನ ಎ ಆರ್ ಟಿ ಕೇಂದ್ರಗಳನ್ನು ರಾಜ್ಯದಲ್ಲಿ ತೆರೆಯಲಾಗಿದೆ ಈಗ ರಾಜ್ಯದಲ್ಲಿ ಏಡ್ಸ್ ಬಾದಿತರಿಗೆ ಚಿಕಿತ್ಸೆ ನೀಡಲು ಒಟ್ಟು 12 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ ಈ ಕೇಂದ್ರಗಳ ಆರಂಭ HIV/AIDS ಬಾದಿತರ ಬದುಕಿನಲ್ಲಿ ಆಶಾಕಿರಣವಾಗಲಿದೆ ನ್ಯಾಕೊದಿಂದ ಇನ್ನು ನಾಲ್ಕು ಸಿಡಿ4 ಯಂತ್ರಗಳನ್ನು ಸರಬರಾಜು ಮಾಡುತ್ತಿದ್ದಾರೆ

- ಅದೇ ರೀತಿಯಲ್ಲಿ ಹೆಚ್‌ಐವಿ ಸೋಂಕಿನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎಆರ್‌ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಷನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ ಯುನಿಸೆಫ್‌ನವರು ವಿವಿಧ ಹಂತಗಳಲ್ಲಿ ತರಬೇತಿ ನೀಡಲು ಸಹಾಯ ಮಾಡುತ್ತಿದ್ದಾರೆ
- ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ
- ಇವುಗಳ ಜೊತೆಗೆ ಸುರಕ್ಷಿತ ಕ್ರಮವಾಗಿ ಕಾಂಡೋಮ್ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಕಾಂಡೋಮ್ ಬಳಕೆ ಕೇವಲ ಸಂತಾನ ನಿಯಂತ್ರಣ ಸಾಧನವಾಗಿರದೇ HIV/AIDS ನಿಯಂತ್ರಣ ಸಾಧನವಾಗಿ ಉಪಯೋಗಿಸಬಹುದೆಂದು ಜನತೆಯಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೆಯೇ ನಿರೋಧ್‌ಗಳನ್ನು ವಿತರಿಸಲಾಗುತ್ತಿದೆ
- "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಾಂತ ವಿವಿಧ ಮಾಧ್ಯಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

582 (882) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗ ಹಾಗೂ ದುರ್ಬಲ ವರ್ಗದವರಿಗೆ ಒಳ ಮೀಸಲಾತಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸರ್ಕಾರದಲ್ಲಿರುವ ಅಂಕಿಅಂಶಗಳೇನು, (ಜಾತಿವಾರು ವಿವರ ಒದಗಿಸುವುದು)?